ಸ್ಪರ್ಶದ ನಿರೀಕ್ಷೆಯಿತ್ತು. ಮಳೆಯೇ ಬಾರದೆಯೂ ಕಿಟಕಿಯಿಂದ ಹನಿ ಬೀಳುತ್ತಿದೆ ಎಂಬ ನೆಪ ಹೂಡಿ ಮತ್ತೆಮತ್ತೆ ನನ್ನೆಡೆಗೆ ಸರಿದು ಬರುತ್ತಿದ್ದವಳಲ್ಲಿ ಅಪ್ಪುಗೆಯ ಬೇಡಿಕೆಯಿತ್ತು. ಆದರೆ, ನನ್ನ ಖಾತೆಯಲ್ಲಿ ಅದ್ಯಾವುದೂ ಇರಲೇ ಇಲ್ಲ! ನನ್ನ ದೃಷ್ಟಿಯಲ್ಲವಳು ಕೇವಲ ಆ ದಿನದ ಆ ಹೊತ್ತಿನ ಭೇಟಿಗೆ, ಸುಖಕ್ಕೆ ಸಿಕ್ಕ ಪ್ರೇಯಸಿಯಾಗಿರಲಿಲ್ಲ. ಭವಿಷ್ಯದ ಅಷ್ಟೂ ದಿನಗಳನ್ನು ಜೊತೆಗೇ ಕಳೆಯುವ ಹೆಂಡತಿಯಾಗಿದ್ದಳು! ನನ್ನೀ ಅತಿಭಾವುಕತೆಯೇ ಅವಳಲ್ಲಿ ನಿರಾಸೆಯನ್ನುಂಟುಮಾಡಿತ್ತೇ? ಮುಂದೆ ಅವಳಿಗೆ ನನ್ನಂತೆಯೇ ಪರಿಚಯವಾದ ಮಂಜುನಾಥ ನಾನು ನೀಡದೇ ಹೋದ ಅದೇ ಅಪ್ಪುಗೆ, ಸ್ಪರ್ಶಗಳನ್ನು ಧಾರಾಳವಾಗಿ ಎತ್ತಿಕೊಟ್ಟಾಗ ಅವಳಿಗೆ ನಾನು ನೀರಸವೆನಿಸಿದೆನೆ? ತುದಿಬೆರಳಿನಿಂದ ಮುಟ್ಟದೆಯೂ ಅವಳ ಅಂತರಂಗಕ್ಕೆ ನನ್ನನ್ನು ಬೆಸೆದುಕೊಂಡು, ಚಾಚುವ ಮೊದಲೇ ಕೈಗೆಟಕುವಷ್ಟು ಸಮೀಪವಿದ್ದೂ ಸಭ್ಯತೆಯ ಗೆರೆಯನ್ನು ದಾಟದೇ ಅವಳನ್ನು ಕಳೆದುಕೊಂಡು, ಕಡೆಯಲ್ಲಿ ಪ್ರೀತಿಯ ಉಳಿಸಿಕೊಳ್ಳಲು ಇನ್ನಿಲ್ಲದಂತೆ ಗೋಳಾಡಿದ ನನ್ನನ್ನು ಅವಳು 'ವಿಕೃತ ಮನಸ್ಸಿನವನು' ಎಂದು ಕರೆದಿದ್ದಳು! ವಿಕೃತ ಮನಸ್ಸು!

ಜೋರಾಗಿ ನಕ್ಕುಬಿಟ್ಟೆ. ದುಃಖಕ್ಕೆ ನಗುವ ಈ ಹುಚ್ಚನ್ನು ಸಹಿಸಲಾರದ ಕಂಬನಿಯ ಹನಿಗಳೆರೆಡು ಕಣ್ಣ ತೊರೆದು ಜಾರಿಹೋದವು.

★★★

ವೈಶಾಲಿಯಿಂದ ಮತ್ತೆ ಫೋನಾಗಲೀ, ಮೆಸೇಜಾಗಲೀ ಬರಲಿಲ್ಲ. ನಿಮ್ಮ ನಿರ್ಧಾರವೇನು ಎಂದು ಮತ್ತೆ ಕೇಳುವ ಧೈರ್ಯ ನನ್ನೊಳಗೆ ಉಳಿದಿರಲಿಲ್ಲ. ವಾರಾಂತ್ಯದ ರಜೆಯ ಬಿಡುವಿನ ಘಳಿಗೆಗಳು ಮನದಲ್ಲಿ ಸೃಷ್ಟಿಸುತ್ತಿದ್ದ ಇಲ್ಲಸಲ್ಲದ ಬೇಸರಗಳಿಂದ ಪಾರಾಗಲೆಂದು ಫೋಟೊಗ್ರಾಫರ್ ಗೆಳೆಯ ಗಣೇಶನ ಜೊತೆ ಪ್ರೀ ವೆಡ್ಡಿಂಗ್ ಫೋಟೊಶೂಟ್ ಒಂದಕ್ಕೆ ತೆರಳಿದೆ.

